ದಾವೋಸ್ ಶೃಂಗಸಭೆಯಿಂದ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳ ಹೊಡಿಕೆ

145(193) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಇತ್ತೀಚೆಗೆ ಮುಖ್ಯಮಂತ್ರಿಗಳು ಭಾಗವಹಿಸಿದ್ದ ದಾವೋಸ್ ಶೃಂಗಸಭೆಯಿಂದ ರಾಜ್ಯದ ವಿವಿಧ ಕ್ಷೇತ್ರದಲ್ಲಿ ಬರಲಿರುವ ವಿದೇಶಿ ಬಂಡವಾಳದ ಪೂರ್ಣ ವಿವರ ನೀಡವುದು:

ಆ. ಇದರಿಂದ ರಾಜ್ಯಕ್ಕೆ ಬರಲಿರುವ ಅಂದಾಜು ವಿದೇಶಿ ಬಂಡವಾಳ ಎಷ್ಟು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 22 ರಿಂದ 26ನೇ ಜನವರಿ 2003ವರೆಗೆ ಸ್ವಿಡ್ಜರ್‌ಲ್ಯಾಂಡ್ ದೇಶದ ದಾವೋಸ್ ನಗರದಲ್ಲಿ ಜರುಗಿದ್ದ ವಿಶ್ವ ವಾಣಿಜ್ಯ ವೇದಿಕೆ ಇದರ ವಾರ್ಷಿಕ ಮಹಾ ಸಭೆ 2003 ರಲ್ಲಿ ಭಾಗ ವಹಿಸಿದ್ದರು. ಪ್ರವಾಸದ ಅವಧಿಯಲ್ಲಿ ಮುಖ್ಯಮಂತ್ರಿಗಳು ಮುಖಾ ಮುಖಿ ಭೇಟಿ ಕಾರ್ಯಕ್ರಮಗನ್ವಯ ಕೆಲವು ಬಹು ರಾಷ್ಟ್ರೀಯ ಕಂಪನಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಭೇಟಿ ಮಾಡಿ ರಾಜ್ಯದಲ್ಲಿರುವ ಬಂಡವಾಳ ಹೂಡಿಕೆ ಅವಕಾಶಗಳ ಬಗ್ಗೆ ತಿಳಿಸುರುತ್ತಾರೆ. ವಿದೇಶಿ ಬಂಡವಾಳವು ಕೆಳಕಂಡ ವಲಯದಲ್ಲಿ ಬರುವ ಸಾಧ್ಯತೆ ಇರುತ್ತದೆ. ಆಹಾರ ಸಂಸ್ಕರಣೆ ಸಾರಿಗೆ ವಾಹನಗಳ ಆಟೋ ಮಾಬೈಲ್ಸ್ ಉತ್ಪಾದನೆ ಜೈವಿಕ ತಂತ್ರಜ್ಞಾನ ವಿದ್ಯುತ್‌ಚಕ್ತಿ ಉತ್ಪಾದನೆ.ವಲಯ ವಿಮಾನ ಯಾನ ಔಷಧಿ ತಯಾರಿಕೆ.

ಆ. ಮಾನ್ಯ ಮುಖ್ಯಮಂತ್ರಿಗಳು ಮೇಲ್ಕಾಣಿಸಿದ ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರನ್ನು ಭೇಟಿ ಮಾಡಿದ ಸಮಯದಲ್ಲಿ ಸದರಿ ಕಂಪನಿಗಳ ಮುಖ್ಯಸ್ಥರು ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಮತ್ತು ಸರ್ಕಾರದಿಂದ ದೊರಕುವ ಉತ್ತೇಜನಗಳ ಬಗ್ಗೆ ಅಭ್ಯಸಿಸಿ ವರದಿ ನೀಡಲು ಸದ್ಯದಲ್ಲಿ ನಿಯೋಗವನ್ನು ಕರ್ನಾಟಕ ರಾಜ್ಯಕ್ಕೆ ಕಳುಹಿಸುವುದಾಗಿ ಆಶ್ವಾಸನೆ ಇತ್ತಿದ್ದಾರೆ. ಸದರಿ ನಿಯೋಗವು ವರದಿ ಸಲ್ಲಿಸಿದ ನಂತರ ಸಂಬಂಧಪಟ್ಟ ಬಹು ರಾಷ್ಟ್ರೀಯ ಕಂಪನಿಗಳು ರಾಜ್ಯದಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆಗಳು ಮತ್ತು ಅವುಗಳಲ್ಲಿ ಹೂಡಲಿರುವ ಬಂಡವಾಳವು ಸಂಬಂಧಪಟ್ಟವರೊಂದಿಗೆ ಚರ್ಚಿಸಿದ ನಂತರ ತಿಳಿಯುವುದು.

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ 33 ಕೆ.ವಿ.ಸ್ಟೇಷನ್ ನಿರ್ಮಾಣ

ಅ. 146(247) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ 33 ಕೆ.ವಿ.ಸ್ಟೇಷನ್ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಅ. ಹೌದು, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ 33 ಕೆ.ವಿ.ಸ್ಟೇಷನ್ ನಿರ್ಮಾಣ ಮಾಡುವ ಬಗ್ಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಮೂಲಕ ಕ್ರಮಕೈಗೊಳ್ಳಲಾಗುತ್ತಿದೆ.